**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ:ಶಿ.ವ.ಕೋಶ.ಸಾ.ವ/01/2020-21 ದಿನಾಂಕ:04/12/2020

**ತಿದ್ದುಪಡಿ ಜ್ಞಾಪನ**

**ವಿಷಯ:** 2020-21ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಒಳಗೊಂಡಂತೆ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಪ್ರೌಢ ಶಾಲಾ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರು ಹಾಗೂ ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಗಳನ್ನು ಕಡ್ಡಾಯವಾಗಿ ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸುವ ಬಗ್ಗೆ.

**ಉಲ್ಲೇಖ:** ಈ ಕಛೇರಿ ಅಧಿಕೃತ ಜ್ಞಾಪನ ಸಮ ಸಂಖ್ಯೆ ದಿನಾಂಕ.11.11.2020

******

2020-21 ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಒಳಗೊಂಡಂತೆ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಪ್ರೌಢ ಶಾಲಾ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರು ಹಾಗೂ ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಗಳನ್ನು ಕಡ್ಡಾಯವಾಗಿ ಗಣಕೀಕೃತ ಕೌನ್ಸೆಲಿಂಗ್ ಮೂಲಕ ನಡೆಸುವ ಬಗ್ಗೆ ಉಲ್ಲೇಖಿತ ಜ್ಞಾಪನ ಪತ್ರದಲ್ಲಿ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

(1) ಸದರಿ ಜ್ಞಾಪನ ಪತ್ರದಲ್ಲಿ ಪುಟ ಸಂಖ್ಯೆ 05 ರಲ್ಲಿ ಆದ್ಯತೆಗಳ ವಿವರ ಮತ್ತು ಸಲ್ಲಿಸಬೇಕಾದ ಪ್ರಮಾಣ ಪತ್ರಗಳ ಕುರಿತು ಆದ್ಯತೆ ಕ್ಲೇಮು ಕ್ರಮ ಸಂಖ್ಯೆ 02 ರಲ್ಲಿ ಶೇಕಡ 40 ರಷ್ಟು ಅಥವಾ ಅದಕ್ಕಿಂತ ಹೆಚ್ಚು ಅಂಗವೈಕಲ್ಯವಿರುವ ಶಿಕ್ಷಕ/ಶಿಕ್ಷಕಿ ಅಥವಾ ಪತಿ/ಪತ್ನಿ ಅಥವಾ ಮಕ್ಕಳು ರವರು ದಿನಾಂಕ.01.08.2020 ರ ನಂತರ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರಗಳನ್ನು ಮಾತ್ರ ಸಲ್ಲಿಸುವುದು ಎಂದು ಸೂಚಿಸಲಾಗಿರುತ್ತದೆ. ಈ ಸೂಚನೆಯನ್ನು ಸದರಿ ತಿದ್ದುಪಡಿ ಜ್ಞಾಪನಾದಲ್ಲಿ ಕೆಳಕಂಡಂತೆ ಮಾರ್ಪಡಿಸಿದ್ದು, ಸಂಬಂಧಿಸಿದ ಶಿಕ್ಷಕರುಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ.

**ಪ್ರಸ್ತುತ ಕೋವಿಡ್-19 ರ ಪ್ರಯುಕ್ತ, ಅಂಗವಿಕಲ ಶಿಕ್ಷಕರು ಹಾಗೂ ಅವರ ಪತಿ/ಪತ್ನಿ ಅಥವಾ ಮಕ್ಕಳು ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ವೈದ್ಯಕೀಯ ಪ್ರಮಾಣ ಪತ್ರವನ್ನು ನಿಗಧಿತ ಕೌನ್ಸಿಲಿಂಗ್ ದಿನಾಂಕದ ಹಿಂದಿನ ದಿನದವರೆಗೂ ಪಡೆಯಲು ಅನುಮತಿ ನೀಡಲಾಗಿದ್ದು, ಈ ರೀತಿ ಪಡೆದ ಪ್ರಮಾಣ ಪತ್ರಗಳನ್ನು ನಿಗಧಿತ ಕೌನ್ಸಿಲಿಂಗ್ ದಿನಾಂಕದಂದು ಒಂದು ಗಂಟೆ ಮುಂಚಿತವಾಗಿ ಸಕ್ಷಮ ಪ್ರಾಧಿಕಾರದ ಸಮಕ್ಷಮ ಪರಿಶೀಲನೆಗೆ ಹಾಜರುಪಡಿಸಲು ಅವಕಾಶ ಕಲ್ಪಿಸಿದೆ.**

[ಮಾನ್ಯ ಆಯುಕ್ತರ ಆದೇಶದ ಮೇರೆಗೆ]

**ನಿರ್ದೇಶಕರು**
**[ಅಲ್ಪಸಂಖ್ಯಾತ ಭಾಷಾ ನಿರ್ದೇಶನಾಲಯ]**
**ಹಾಗೂ ವರ್ಗಾವಣೆ ಕೋಶದ ಮುಖ್ಯಸ್ಥರು**

**ಇವರಿಗೆ, ಅಗತ್ಯ ಕ್ರಮಕ್ಕಾಗಿ**

1. ಸಹ ನಿರ್ದೇಶಕರು, ಬೆಂಗಳೂರು/ಮೈಸೂರು/ಅಪರ ಆಯುಕ್ತರ ಕಛೇರಿ ಕಲ್ಬುರ್ಗಿ/ಧಾರವಾಡ
2. ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ಮೈಸೂರು /ಬೆಳಗಾವಿ/ಕಲಬುರಗಿ
3. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ)
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.